**ಸಾಕ್ಷಿಯನ್ನು ದಿಃ 11.10.2023 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಕೆ.ವಿ.ಎಸ್ ವಕೀಲರಿಂದಃ

ನಾನು ಮತ್ತು ಪ್ರತಿವಾದಿ ಬೇರೆ ಬೇರೆ ಮನೆಯಲ್ಲಿ ವಾಸ ಇರುತ್ತೇವೆ ಈ ಪ್ರಕರಣದಲ್ಲಿ ಪ್ರತಿವಾದಿ ಏನು ತಕರಾರು ಸಲ್ಲಿಸಿರುತ್ತಾರೆಂದು ತಿಳಿದುಕೊಂಡಿಲ್ಲ. ಈ ಪ್ರಕರಣ ಸಲ್ಲಿಸಿದ ನಂತರ ನಾನು ಎ.ಸಿ. ನ್ಯಾಯಾಲಯದಲ್ಲಿ ಖಾತೆ ಬದಲಾವಣೆ ಸಂಬಂಧ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿಯೇ ಸಲ್ಲಿಸಿದ್ದೆನು. ದಾವಾ ಐಟಂ ನಂ.1 ರಿಂದ 3 ರ ಸ್ವತ್ತಿನ ಸಂಬಂಧ ಎ.ಸಿ ನ್ಯಾಯಾಲಯದಲ್ಲಿ ಪ್ರಕರಣ ಇರುತ್ತದೆ. ಎ.ಸಿ ನ್ಯಾಯಾಲಯದಲ್ಲಿ ನಾನು ಸಲ್ಲಿಸಿದ ಪ್ರಕರಣ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ ಬಗ್ಗೆ ವಾದಪತ್ರದಲ್ಲಿ ತಿಳಿಸಿಲ್ಲ

ದಾವಾ ಐಟಂ ನಂ.1 ರಿಂದ 3 ರ ಸ್ವತ್ತು ಪ್ರತಿವಾದಿಗೆ ಸೇರಿದ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳನ್ನು ಪ್ರತಿವಾದಿ ಖರೀಧಿಸಿ ಖಾತೆ ಬದಲಾವಣೆ ಮಾಡಿಕೊಂಡು ಅನುಭೋಗದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾಐಟಂ ನಂ.4 ಮತ್ತು 5 ರ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ದಾವಾ ಐಟಂ ನಂ. 4 ರ ಸ್ವತ್ತಿನಲ್ಲಿ ನಾನು ಮತ್ತು ಪ್ರತಿವಾದಿ ತಲಾ 2 ಎಕರೆ 12 ಗುಂಟೆ ವಿಭಾಗ ಮಾಡಿಕೊಂಡು ಅದರಂತೆ ಖಾತೆ ಬದಲಾವಣೆ ಮಾಡಿಕೊಂಡಿರುತ್ತೇವೆಂದರೆ ಸಾಕ್ಷಿ ಯಾವುದೇ ಭಾಗವಾಗಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ 5 ರಲ್ಲಿ ಈ ಸಂಬಂಧ ನಮೂದಾತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮತ್ತು ಪ್ರತಿವಾದಿಯ ಪಡಿತರ ಚೀಟಿ, ವಿದ್ಯುತ್ ಚಕ್ತಿ ಬಿಲ್ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ದಾವಾ ಐಟಂ ನಂ. 1 ರಿಂದ 4 ರ ಸಂಬಂಧ ಸ್ವತ್ತುಗಳ ಬಗ್ಗೆ ನಾವು ಬ್ಯಾಂಕ್ ನಿಂದ ಸಾಲ ಪಡೆದಿರುತ್ತೇವೆ. ದಾವಾ ಐಟಂ ನಂ. 1 ರಿಂದ 3 ರ ಸ್ವತ್ತುಗಳು ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ಅವರ ತಾಯಿ ಪ್ರತ್ಯೇಕ ವಾಸ ಇದ್ದು , ಅವರ ಸ್ವಂತ ಆಧಾಯದಿಂದ ದಾವಾ ಐಟಂ ನಂ. 1 ರಿಂದ 3 ರ ಸ್ವತ್ತುಗಳನ್ನು ಖರೀಧಿಸಿರುತ್ತಾರೆ ಎಂದರೆ ಸರಿಯಲ್ಲ. 1976 ರಿಂದ 1980 ಒಳಗೆ ದಾವಾ ಐಟಂ ನಂ. 1 ರಿಂದ 3 ರ ಸ್ವತ್ತುಗಳನ್ನು ಪ್ರತಿವಾದಿ ಖರೀಧಿಸಿದ್ದು ಅದರಂತೆ ಪ್ರತ್ಯೇಕ

ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.5 ರ ಸ್ವತ್ತು ಪ್ರತಿವಾದಿಯ ತಾಯಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಸಂಬಂಧ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**sd/-**

**(ಕೇಶವಮೂರ್ತಿ.ಬಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ**